



ರಸ್ತೆಯ ಮೇಲೆ ಅವರ ಪಾದಗಳಿಂದ ಹರಿದಿದ್ದ ಹಸಿ ನೆತ್ತರು ನಮ್ಮ ಪಾದಗಳಿಗೂ ಮೆತ್ತಿಕೊಂಡಿತು. ಅವರ ನಡಿಗೆಯಲ್ಲಿ ಹೆಪ್ಪುಗಟ್ಟಿದ್ದ ಆ ಮೌನ ಬಹುಕಾಲ ಹೀಗೆಯೇ ಉಳಿಯುವುದಿಲ್ಲ ಎನಿಸಿತು ನನಗೆ. ಅದೇ ರಾತ್ರಿ ನಿದ್ರೆಯ ಮಂಪರಿನಲ್ಲಿ ನಾವು ಬಿಟ್ಟುಬಂದ ನಗರ ಆಗಾಗ ನರಳುತ್ತಿರುವ ಶಬ್ದ ಅಸ್ಪಷ್ಟವಾಗಿ ನನಗೆ ಕೇಳಿಸುತ್ತಿತ್ತು. ಮನುಷ್ಯರಿಗಾಗಿ ಮಿಡಿಯುವ ಗುಣವನ್ನು ಎಂದೋ ಕಳೆದುಕೊಂಡು ನಾರುತ್ತಿರುವ ಈ ನಗರ, ಎಷ್ಟೊಂದು ಕಪಟವೇಷಗಳನ್ನು ತೊಟ್ಟು ನಮ್ಮನ್ನು ವಂಚಿಸುತ್ತದೆ! ನೆನೆದಷ್ಟೂ ಭಯವಾಗುತ್ತದೆ.

ಜಗತ್ತಿನಲ್ಲಿ ಯಾರೂ ನೋಡಬಾರದ ಹೃದಯ ವಿದ್ರಾವಕ ದೃಶ್ಯವೊಂದನ್ನು ನಾನು ನೋಡಬೇಕಾಯಿತು! ರೈಲು ಹಳಿಗಳ ಮೇಲೆ ಅನಾಥವಾಗಿ ಬಿದ್ದಿದ್ದ ಹತ್ತಾರು ಹೆಣಗಳು. ಅಕಾಲಿಕ ಮರಣದ ಘನಘೋರ ದೃಶ್ಯ ಅದು. ಕೆಲವು ರೊಟ್ಟಿಯ ಚೂರುಗಳು ಮಸುಕಾದ ಚಂದಿರನಂತೆ ಹಳಿಯ ಮೇಲೆಲ್ಲಾ ಅಡ್ಡಾದಿಡ್ಡಿಯಾಗಿ ಬಿದ್ದಿದ್ದವು. ಇದನ್ನೆಲ್ಲಾ ನೋಡಿದ ರೇವತಿ ಮುದುಡಿಹೋದಳು. ನನಗೂ ಮಾತು ಹೊರಡಲಿಲ್ಲ! ಶವಗಳ ಬದಿಯಲ್ಲೇ ದಿಕ್ಕಿಲ್ಲದೆ ಬಿದ್ದಿದ್ದ ಸಡಿಲಾದ ಬಟ್ಟೆಯ ಗಂಟೊಂದನ್ನು ನಿಧಾನವಾಗಿ ರೇವತಿ ಬಿಚ್ಚಿದಳು. ಅದರೊಳಗೆ ಎರಡು